


# ಕ್ರ್ಯಾಶ್ ಟೆಸ್ಟ್!

## ಕಾರುಗಳ ಸುರಕ್ಷತೆಗೆ ಅಗ್ನಿಪರೀಕ್ಷೆ

ಆಧುನಿಕ ಜಗತ್ತಿನ ಬಹುದೊಡ್ಡ ಲಾಂಛನಗಳಲ್ಲಿ ಕಾರು ಕೂಡ ಒಂದು. ವಿಶ್ವದ ಚಲನಶೀಲತೆ, ವೇಗ ಮತ್ತು ಐಷಾರಾಮದ ಸಂಕೇತಗಳಂತಿರುವ ಕಾರುಗಳು ನಾಗರಿಕ ಜಗತ್ತಿನ ಅವಿಭಾಜ್ಯ ಅಂಗವಾಗಿವೆ. ಮಧ್ಯಮವರ್ಗದ ಕೈಗಳಿಗೂ ಕಾರು ಎಟುಕುತ್ತಿರುವ ದಿನಗಳಿವು. ಕಾರಿನ ವೇಗ, ಇಂಧನಕ್ಷಮತೆ ಹಾಗೂ ಸೌಕರ್ಯಗಳ ಬಗ್ಗೆ ಗಮನಹರಿಸುವ ಗ್ರಾಹಕರು, ಅವುಗಳ ಸುರಕ್ಷತೆಯ ಸಾಮರ್ಥ್ಯದ ಬಗ್ಗೆ ಹೆಚ್ಚಿನ ಗಮನಹರಿಸುವುದಿಲ್ಲ. ಇತ್ತೀಚಿನ ವರ್ಷಗಳವರೆಗೂ ಕಾರಿನ ಸುರಕ್ಷತೆಯ ಬಗ್ಗೆ ಬಹುತೇಕ ತಯಾರಿಕಾ ಕಂಪನಿಗಳೂ ಹೆಚ್ಚಿನ ನಿಗಾ ವಹಿಸಿರಲಿಲ್ಲ. ಈಗ ಕಾಲ ಬದಲಾಗಿದೆ. ಕಾರುಗಳ ಸುರಕ್ಷತೆಯ ಬಗ್ಗೆ ನಿಗಾ ವಹಿಸಲೇ ಕೆಲವು ಸಂಸ್ಥೆಗಳಿವೆ. ತಯಾರಿಕಾ ಕಂಪನಿಗಳು ಕೂಡ ಕಾರುಗಳ ಅಭಿವೃದ್ಧಿ ಹಂತದಲ್ಲೇ ಸುರಕ್ಷತೆಯ ಬಗ್ಗೆ ನಿಗಾ ವಹಿಸುತ್ತಿವೆ. ಅಂದಹಾಗೆ, ಕಾರಿನ ಸುರಕ್ಷತೆಯ ಮಾನದಂಡಗಳೇನು? ಸುರಕ್ಷತೆಯ ಪರೀಕ್ಷೆಯಲ್ಲಿ ಪಾಸಾಗಲು ಒಂದು ಕಾರು ಯಾವೆಲ್ಲ ಏನೆಲ್ಲ ಸವಾಲುಗಳನ್ನು ಎದುರಿಸಬೇಕು? ಈ ಪ್ರಶ್ನೆಗಳಿಗೆ ಉತ್ತರಿಸುವ 'ಸುಧಾ' ವಿಶೇಷ ಬರಹ, ಕಾರಿನ ಸುರಕ್ಷತೆಯ ಬಗ್ಗೆ ಹಲವು ಸಂಗತಿಗಳನ್ನು ಸರಳವಾಗಿ ತಿಳಿಸುವ ಪ್ರಯತ್ನವಾಗಿದೆ.

■ ಜಯಸಿಂಹ ಆರ್.